**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ**
**ಸಿ.ಸಿ.899/2022**

| | | |
|---|---|---|
| ಸಾಕ್ಷಿದಾರರ ಹೆಸರು | : ಮಹೇಶ್ | ಪ್ರಾಸಾ-7 |
| ತಂದೆಯ ಹೆಸರು | : ಮಹಾಲಿಂಗಪ್ಪ | ಚಾಸಾ-8 |
| ವಯಸ್ಸು | : 43 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪ್ರಸೂತಿ ಮತ್ತು ಸ್ತ್ರೀ ರೋಗ ತಜ್ಞರು | ದಿನಾಂಕಃ 30.12.2025. |
| ವಾಸಸ್ಥಳ | : ದಾವಣಗೆರೆ ಆಸ್ಪತ್ರೆ | |

**:ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:**

The Cw.8 appear through V.C in the presence of Co-ordinator by Hemanna, AEO.

ನಾನು 2021 ಸೆಪ್ಟಂಬರ್ ರಿಂದ 2022 ಏಪ್ರಿಲ್ ರವರೆಗೂ ಚಿಕ್ಕಮಗಳೂರಿನ ಸರ್ಕಾರಿ ಆಸ್ಪತ್ರೆಯಲ್ಲಿ Casuality Medical Officer ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೆ.

ದಿ.17.01.2022 ರಂದು ಚಾಸಾ-1 ರವರು ಹಲ್ಲೆಯ ಹಿನ್ನಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದು ನಾನು ಅವರನ್ನು ಪರೀಕ್ಷೆಗೆ ಒಳಪಡಿಸಲಾಗಿ ಚಾಸಾ-1 ರವರ ಎಡಗೈ ನ ಮಣಿಕಟ್ಟಿನಲ್ಲಿ ಕತ್ತರಿಸಿದ ರೀತಿಯಲ್ಲಿ ಒಂದು ಗಾಯವಾಗಿರುತ್ತದೆ. ಸದರಿಯವರಿಗೆ ನಾನು ಚಿಕಿತ್ಸೆಯನ್ನು ನೀಡಿರುತ್ತೇನೆ. ನಂತರ ದಿ.31.03.2022 ರಂದು ಪೋಲಿಸರು ಗಾಯದ ಪ್ರಮಾಣ ಪತ್ರವನ್ನು ನೀಡುವಂತೆ ಕೋರಿದ ಮನವಿಯ ಮೇರೆಗೆ ನಾನು ಚಾಸಾ-1 ರವರಿಗೆ ಸಂಬಂಧಿಸಿದ ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಚಾಸಾ-1 ರವರಿಗೆ ಸಾಮಾನ್ಯ ಸ್ವರೂಪದ ಗಾಯವಾಗಿರುತ್ತದೆ.

ಸಾಕ್ಷಿಯು ನಿಪಿ-10 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ-10(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ ಎಸ್.ಬಿ.ಎ. ವಕೀಲರಿಂದಃ**

ಸಾಮಾನ್ಯವಾಗಿ ಚಾಸಾ-1 ರವರಿಗೆ ಆಗಿರುವ ಗಾಯವು ತೋಟದಲ್ಲಿ ಕೆಲಸ ಮಾಡುವ ಸಮಯದಲ್ಲಿ ಕಾಫೀ ಗಿಡದ ಕಡ್ಡಿಯು ತಾಕಿದ ಸಂದರ್ಭದಲ್ಲಿ ಸದರಿ ಗಾಯವು ಸಂಭವಿಸಿರುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಚಾಸಾ-1 ರವರಿಗೆ ಆಗಿರುವ ಗಾಯದ ಅಳತೆಯನ್ನು ಅಂದಾಜಿನ ಮೇರೆಗೆ ಬರೆಯಲಾಗಿರುತ್ತದೆ. ನಿಪಿ-10 ರಲ್ಲಿ ಚಾಸಾ-1 ರವರಿಗೆ ಸಂಭವಿಸಿರುವ ಗಾಯವು 3 ರಿಂದ 4 ಸೆ.ಮೀ. ನದ್ದಾಗಿರುತ್ತದೆ ಎಂದು ನಮೂದು ಮಾಡಿಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನ್ನ ವರದಿಯಲ್ಲಿ 4 ಸೆ.ಮೀ. ಎಂದು ನಮೂದಿಸಿರುತ್ತೇನೆ ಎಂದು ನುಡಿಯುತ್ತಾರೆ. ಚಾಸಾ-1 ರವರು ಆ ದಿನ ಆಸ್ಪತ್ರೆಯಲ್ಲಿ ಎಷ್ಟು ಗಂಟೆಗಳ ಕಾಲ ಇದ್ದರು ಎಂದು ಹೇಳಲು ಸಾಧ್ಯವಿಲ್ಲ. ಚಾಸಾ-1 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲ</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಾಕ್ಷಿ ಸಹಿಃ

ಸಹಿ/-

Co-ordinator:

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.